ಶ್ರೀ ಡಿ. ಕೆ. ಶಿವಕುಮಾರ್: ಈ ಇಲಾಖೆಯ ಬೇಡಿಕೆಯ ಮೇಲೆ ಏನೇನು ಬೇಕೊ ಚರ್ಚೆ ಮಾಡಿ, ರೇವಣ್ಣ ನನ್ನ ಸ್ನೇಹಿತರು.,

ಶ್ರೀ ಸಿ. ಟಿ. ರವಿ: ಬೆಳಿಗ್ಗೆ ನಿಂಬೆಹಣ್ಣನ್ನು ಹಿಡಿದುಕೊಂಡು ಬಂದಿದ್ದರು, ಅದನ್ನು ಶಿವಕುಮಾರ್ ಅವರಿಗೆ ಕೊಟ್ಟಿರಬಹುದು.

ಶ್ರೀ ಬಿ. ಸುನಿಲ್ ಕುಮಾರ್ ಹೆಗಡೆ: ಮಾನ್ಯ ಅಧ್ಯಕ್ಷರೆ, ಇವರು (ಶಿವಕುಮಾರ್) ಈ ರೀತಿ ಹೇಳಿದ್ದರಿಂದ ಯಾರಿಗೆ ಕರೆಂಟ್ ಶಾಕ್ ಹೊಡೆಯಿತು?

ಶ್ರೀ ಡಿ. ಕೆ. ಶಿವಕುಮಾರ್: He is a former Power Minister.

ಅಧ್ಯಕ್ಷರು: ಆ ಕರೆಂಟ್ ಇದೆಯಲ್ಲಾ, ಅವರಿಗೂ ಹೊಡೆಯುವುದಿಲ್ಲ, ಇವರಿಗೂ ಹೊಡೆಯುವುದಿಲ್ಲ, ನಿಮಗೆ ಹೊಡೆಯುತ್ತದೆ.

ಶ್ರೀ ವೈ. ಎಸ್. ವಿ. ದತ್ತಾ: ಮಾನ್ಯ ಶಿವಕುಮಾರ್ ಅವರೆ, ಮೊನ್ನೆ ಕಡೂರಿನದು transformer ಸಂಖ್ಯೆ double ಮಾಡಿ ಎಂದು ಬರೆದು ಕೊಟ್ಟಿರಿ, ಅದನ್ನು ಬೆಸ್ಕಾಂ Jar ಅವರಿಗೆ ಕೊಟ್ಟಿದ್ದೆ, ಇನ್ನೂ ಕ್ರಮವಾಗಿಲ್ಲ.

ಶ್ರೀ ಡಿ. ಕೆ. ಶಿವಕುಮಾರ್: ಬರುತ್ತದೆ, ಬರುತ್ತದೆ, ನಿನ್ನನ್ನು ಅವ್ಯಾವನೊ ಒಬ್ಬ ಅಗೌರವವಾಗಿ ಕಂಡ ಎಂದು ಹೇಳಿದಿರಿ, within a few minutes I suspended him.

ಶ್ರಿ ವೈ. ಎಸ್. ವಿ. ದತ್ತಾ: Thank you.

ಶ್ರೀ ಡಿ. ಕೆ. ಶಿವಕುಮಾರ್: ಈ ರಿಪ್ಲೈ ಕೊಟ್ಟಿದ್ದೇನೆ, ಅವರಿಗೆ ಸಮಾಧಾನವಾಗಿದೆ.

ಅಧ್ಯಕ್ಷರು: ಬಣಕಾರ್ ಇಲ್ಲ.

xiv) ವಿಷಯ: ಆನೆ ದಾಳಿಗೆ ತುತ್ತಾಗಿ ಬೆಳೆ ನಷ್ಟವಾಗಿದ್ದು, ರೈತರಿಗೆ ಪರಿಹಾರವನ್ನು ಜರೂರು ಒದಗಿಸಿಕೊಡುವ ಬಗ್ಗೆ:

ಶ್ರೀ ಎಸ್. ಅಂಗಾರ (ಸುಳ್ಯ): ಮಾನ್ಯ ಅಧ್ಯಕ್ಷರೆ, ಸುಳ್ಯ ತಾಲ್ಲೂಕಿನ ಮಂಡೆಕೋಲು ಮತ್ತು ಅಜ್ಜಾವರ ಗ್ರಾಮಗಳಲ್ಲಿ ದಿನಾಂಕ: 08.07.2014ರ ರಾತ್ರಿ ಆನೆಗಳ ಹಾವಳಿಯಿಂದಾಗಿ ಪುತ್ಯಾ, ಶಿವಾಜಿನಗರ, ತಿರತೋಡಿ ಬುಲಗಲ್ಲು, ಪುಂಡಪೊರೆ ಮತ್ತು ಅಜ್ಜಾವರ ಗ್ರಾಮದ 4 ಕಡೆ ಈ ರೀತಿಯ ನಷ್ಟವುಂಟಾಗಿದೆ. ಅದಕ್ಕೆ ಸಂಬಂಧಪಟ್ಟ ಅರಣ್ಯ ಸಚಿವರು ಪರಿಹಾರ ಕೊಡಬೇಕೆಂದು ಹೇಳಬಯಸುತ್ತೇನೆ.

ಸೂಚನೆ: ದಕ್ಷಿಣ ಕನ್ನಡ ಜಿಲ್ಲೆ ಸುಳ್ಯ ತಾಲ್ಲೂಕಿನ ಮಂಡೆಕೋಲು ಹಾಗೂ ಅಜ್ಜಾವರ ಗ್ರಾಮಗಳಿಗೆ ಆನೆಗಳು ನುಗ್ಗಿ ಇಲ್ಲಿ ಬೆಳೆದಿದ್ದಂತ ರೈತರ ಅಪಾರ ಪ್ರಮಾಣದ ಕೃಷಿ ಬೆಳೆಗಳಲ್ಲದೇ ತಾಳೆ–ಬಾಳೆ–ತೆಂಗು ಮರಗಳನ್ನು ಹಾನಿಗೊಳಿಸಿವೆ. ಇದರಿಂದ ತುಂಬಾ ನಷ್ಟ ಉಂಟಾಗಿರುತ್ತದೆ. ಅತೀ ಹೆಚ್ಚು ಮಂಡೆಕೋಲಿನಲ್ಲಿ ರೈತರಿಗೆ ನಷ್ಟವಾಘಿದ್ದು ಈ ಭಾಗದ ರೈತಾಪಿ ಕೃಷಿಕರು ಇದರಿಂದ ಆತಂಕಕ್ಕೊಳಗಾಗಿದ್ದಾರೆ. ಇಲ್ಲಿ ಆನೆ ದಾಳಿಗೆ ತುತ್ತಾದ ಬೆಳೆನಷ್ಟ ಪರಿಹಾರವನ್ನು ಜರೂರು ಒದಗಿಸಿಕೊಡಬೇಕಾದ ಕುರಿತಂತೆ.

ಶ್ರೀ ಬಿ. ರಮಾನಾಥ ರೈ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು): ಮಾನ್ಯ ಅಧ್ಯಕ್ಷರೆ, ಸುಳ್ಯ ತಾಲ್ಲೂಕು ಮಂಡೆಕೋಲು ಹಾಗೂ ಅಜ್ಜಾವರ ಗ್ರಾಮಗಳಿಗೆ ಕಾಡಾನೆಗಳು ನುಗ್ಗಿ ಬೆಳೆ ನಷ್ಟವನ್ನುಂಟು ಮಾಡಿರುವ ವಿಚಾರದ ಕುರಿತು ದಿನಾಂಕ: 09.07.2014 ರಂದು ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ವಿಭಾಗ ಇವರು ಖುದ್ದಾಗಿ ಸ್ಥಳ ಪರಿಶೀಲಿಸಿದ್ದು, ಈ ಬಗ್ಗೆ ಸಂಬಂಧಿಸಿದ ರೈತರುಗಳೊಂದಿಗೆ ಚರ್ಚಿಸಿದ್ದು ಸೂಕ್ತ ಕ್ರಮ ಕೈಗೊಳ್ಳಲಾಗು ವುದೆಂದು ಮನವರಿಕೆ ಮಾಡಿರುತ್ತಾರೆ. ಈಗಾಗಲೇ ಈ ಪ್ರದೇಶದಲ್ಲಿ 2013–14ನೇ ಸಾಲಿನಲ್ಲಿ 3.00 ಕಿ. ಮೀ. ಆನೆ ನಿರೋಧಕ ಕಂದಕವನ್ನು ನಿರ್ಮಾಣ ಮಾಡಲಾಗಿದ್ದು 2014–15ನೇ ಸಾಲಿನಲ್ಲಿ 5.5 ಕಿಮೀ. ಆನೆ ನಿರೋಧಕ ಕಂದಕ ಹೊಸದಾಗಿ ನಿರ್ಮಾಣ ಮಾಡಲು ಅನುದಾನ ಬಿಡುಗಡೆ ಮಾಡಲಾಗಿ ರುತ್ತದೆ. ಇದರಲ್ಲಿ ಈಗಾಗಲೇ 1.5 ಕಿಮೀ. ಕಂದಕವನ್ನು ನಿರ್ಮಿಸಲಾಗಿದ್ದು ಇನ್ನು ಅವಶ್ಯಕತೆ ಇರುವಂತಹ ಸೂಕ್ಷ್ಮ

ಪ್ರದೇಶಗಳನ್ನು ಗುರುತಿಸಿ ಆನೆ ನಿರೋಧಕ ಕಂದಕವನ್ನು ನಿರ್ಮಿಸಲಾಗುವುದು.

ಅಲ್ಲದೇ ಕಾಡಾನೆಗಳನ್ನು ಓಡಿಸಲು ತಾತ್ಕಾಲಿಕ ರಕ್ಷಣಾ ಕ್ಯಾಂಪ್ ಮಾಡಿ ಸಿಬ್ಬಂದಿ ಹಾಗೂ ಕೂಲಿ ಜನರನ್ನು ನಿಯುಕ್ತಿಗೊಳಿಸಲಾಗಿದೆ. ಈ ಸಾಲಿನಲ್ಲಿ ಸುಳ್ಯ ತಾಲ್ಲೂಕಿನಲ್ಲಿ ₹5.00 ಲಕ್ಷ ಬೆಳೆಹಾನಿ ಆಗಿರುವ ಬಗ್ಗೆ ಅಂದಾಜಿಸಿದ್ದು, ಇದಕ್ಕೆ ಪರಿಹಾರಧನ ಪಾವತಿಸಲು ಬಾಕಿ ಇರುತ್ತದೆ. ಕಳೆದ ಮೂರು ವರ್ಷಗಳಲ್ಲಿ ಸುಳ್ಯ ತಾಲ್ಲೂಕಿಗೆ ಸಂಬಂಧಿಸಿದಂತೆ, 2011–12ನೇ ಸಾಲಿನಲ್ಲಿ ₹ 1.30 ಲಕ್ಷ; 2012–13ನೇ ಸಾಲಿನಲ್ಲಿ ₹ 146 ಲಕ್ಷ; 2013–14ನೇ ಸಾಲಿನಲ್ಲಿ ₹ 4.73 ಲಕ್ಷ ಬೆಳೆ ಪರಿಹಾರ ಪಾವತಿಸಲಾಗಿದೆ. ಅಲ್ಲದೆ, ಸುಳ್ಯ ತಾಲ್ಲೂಕಿನಲ್ಲಿ ಕಾಡಾನೆ ದಾಳಿಯಿಂದ ಮೃತಪಟ್ಟ ಒಂದು ಪ್ರಕರಣದಲ್ಲಿ ₹5.00 ಲಕ್ಷವನ್ನು ಪರಿಹಾರಧನ ಪಾವತಿಸಲಾಗಿದೆ ಎಂಬುದನ್ನು ತಮ್ಮ ಅವಗಾಹನೆಗೆ ತರಲಾಗಿದೆ.

ದಿನಾಂಕ: 09.07.2014 ರಂದು ಉಂಟಾದ ಬೆಳೆಹಾನಿ ಪ್ರಕರಣಗಳಿಗೆ ಒಟ್ಟೂ ₹5.00 ಲಕ್ಷಗಳೆಂದು ಅಂದಾಜಿಸಿದ್ದು, ಪ್ರಕರಣಗಳನ್ನು ಪರಿಶೀಲಿಸಿ ರೈತರಿಗೆ ಚಾಲ್ತಿಯಲ್ಲಿರುವ ಸರ್ಕಾರದ ಆದೇಶದ ಪ್ರಕಾರ ದಯಾತ್ಮಕ ಧನ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.

ಅಧ್ಯಕ್ಷರು: ಪರಿಹಾರವನ್ನು ಬೇಗ ಪೇಮೆಂಟ್ ಮಾಡಿ.

ಶ್ರೀ ಎಸ್. ಅಂಗಾರ: ಮಾನ್ಯ ಅಧ್ಯಕ್ಷರೆ, ನಷ್ಟ ಜಾಸ್ತಿಯಾಗಿದೆ, ಪರಿಹಾರ ಸ್ವಲ್ಪ ಕಡಿಮೆಯಾಗಿದೆ, ಪರಿಹಾರ ಜಾಸ್ತಿ ಮಾಡಬೇಕೆಂದು ಹೇಳಬಯಸುತ್ತೇನೆ.

ಅಧ್ಯಕ್ಷರು: ಹಾಗೆ ಮಾಡಿ.

ಶ್ರೀ ಬಿ. ರಮಾನಾಥ ರೈ: ಅದನ್ನು ಪರಿಶೀಲಿಸೋಣ, ಏನು ನಷ್ಟವಾಗಿದೆ, ಅದಕ್ಕೆ ಏನು ಪರಿಹಾರ ಕೊಡಬೇಕೊ ಅದನ್ನು ಕೊಡುವುದಕ್ಕೆ ಪ್ರಯತ್ನ ಮಾಡೋಣ.